**ದಿನಾಂಕ 9–11–2020 ರಂದು ಬೆಳಗ್ಗೆ 11.00 ಗಂಟೆಗೆ ಕುಲಪತಿಗಳ ಸಭಾಂಗಣ, ಕೃವಿವಿ., ರಾಯಚೂರಿನಲ್ಲಿ ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 45ನೇ ಸಭೆಯ ನಡವಳಿಗಳು: (ಪರಿಷ್ಕೃತ)**

**ಉಪಸ್ಥಿತರು:**

| | | | |
|---|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು | ಭೌತಿಕ |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, | ಸದಸ್ಯರು | ವರ್ಚುವಲ್ |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 4. | ಶ್ರೀ ರಫೀ ಅಹ್ಮದ್, ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು | ವರ್ಚುವಲ್ |
| 5. | ಶ್ರೀ ಕೊಟ್ರಪ್ಪ ಬಿ. ಕೊರೇರ, ರಾಯಚೂರು | ಸದಸ್ಯರು | ಭೌತಿಕ |
| 6. | ಶ್ರೀ ತ್ರಿವಿಕ್ರಮ ಜೋಶಿ, ರಾಯಚೂರು | ಸದಸ್ಯರು | ಭೌತಿಕ |
| 7. | ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಕೊಪ್ಪಳ | ಸದಸ್ಯರು | ಭೌತಿಕ |
| 8. | ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಗಂಗಾವತಿ | ಸದಸ್ಯರು | ಭೌತಿಕ |
| 9. | ಶ್ರೀ ಸುನಿಲ್, ರಾಯಚೂರು | ಸದಸ್ಯರು | ಭೌತಿಕ |
| 10. | ಡಾ|| ಎಂ.ಆರ್. ದಿನೇಶ್, ನಿರ್ದೇಶಕರು, ಐ.ಐ.ಹೆಚ್.ಆರ್. ಬೆಂಗಳೂರು (ಐಸಿಎಆರ್ ನಿಂದ ನಾಮನಿರ್ದೇಶಿತ) | ಸದಸ್ಯರು | ವರ್ಚುವಲ್ |
| 11. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ | ಭೌತಿಕ |

ಪ್ರಾರಂಭದಲ್ಲಿ, ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಕೋವಿಡ್–19 ಸಾಂಕ್ರಾಮಿಕ ರೋಗದ ನಿಯಂತ್ರಣಾ ಕ್ರಮವಾಗಿ 45ನೇ ಸಭೆಯನ್ನು ವರ್ಚುವಲ್ ಮತ್ತು ಆಫ್‌ಲೈನ್‌ನಲ್ಲಿ ನಡೆಸಲಾಗುತ್ತಿದೆ ಎಂದು ತಿಳಿಸುತ್ತಾ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಿಗೆ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಗೆ ನೂತನವಾಗಿ ನೇಮಕ ಹೊಂದಿದ ಶ್ರೀ ಮಹಾಂತೇಶ್‌ಗೌಡ ಪಾಟೀಲ್, ಶ್ರೀ ಜಿ. ಶ್ರೀಧರ ಕೆಸರಹಟ್ಟಿ ಮತ್ತು ಶ್ರೀ ಸುನಿಲ್ ಇವರನ್ನು ಪರಿಚಯಿಸುತ್ತಾ, ಸ್ವಾಗತ ಕೋರಿದರು ಹಾಗೂ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ತರಾಯಿಸಲಾಯಿತು:

| | |
|---|---|
| ಐಟಂ–1 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 44ನೇ ಸಭೆಯ ಕಾರ್ಯಸೂಚಿಯ ನಡವಳಿಗಳನ್ನು ಸ್ಥಿರೀಕರಿಸುವುದು.**<br><br>**ಠರಾವು:**<br>ದಿನಾಂಕ 9–11–2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 44ನೇ ಸಭೆಯ ನಡವಳಿಗಳನ್ನು ಸ್ಥಿರೀಕರಿಸಲಾಯಿತು.<br><br>**(ಕ್ರಮ : ಕುಲಸಚಿವರು)** |

| | |
|---|---|
| ಐಟಂ–2 | **ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43 ಮತ್ತು 44ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.**<br>ಠರಾವು:<br>ದಿನಾಂಕ 26–2–2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 43ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಈ ಕೆಳಗಿನಂತೆ ನಿರ್ಣಯಿಸಲಾಯಿತು:<br><br>**ಐಟಂ ಸಂಖ್ಯೆ 6: ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ಅಧೀನದಲ್ಲಿರುವ ತೋಟಗಾರಿಕಾ ವಿಭಾಗದ ಫಲಶಾಸ್ತ್ರ ಕಟ್ಟಡವನ್ನು ನೆಲಸಮಗೊಳಿಸುವ ಕುರಿತು.**<br><br>**ಠರಾವು:**<br>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ–ವಿಭಾಗ, ರಾಯಚೂರು ಇವರು ಮುಖ್ಯ ಕೃಷಿ ಸಂಶೋಧನಾ ಕೇಂದ್ರದ ತೋಟಗಾರಿಕಾ ವಿಭಾಗದ ಫಲಶಾಸ್ತ್ರ ಕಟ್ಟಡವನ್ನು ಪರಿವೀಕ್ಷಣೆ ಮಾಡಿ, ನೆಲಸಮಗೊಳಿಸಬಹುದೆಂದು ನೀಡಿದ ಪ್ರಮಾಣಪತ್ರವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಪರಿಶೀಲಿಸಿ, ಸದರಿ ಕಟ್ಟಡವನ್ನು ನೆಲಸಮಗೊಳಿಸಲು ಅನುಮೋದನೆಯನ್ನು ನೀಡಿತು.<br><br>**(ಕ್ರಮ : ಆಸ್ತಿ ಅಧಿಕಾರಿ)**<br><br>**ಐಟಂ ಸಂಖ್ಯೆ 7: ಕೃಷಿ ತಾಂತ್ರಿಕ ಮಹಾವಿದ್ಯಾಲಯ ಅಧೀನದಲ್ಲಿರುವ ಹಳೆಯ ಕೃಷಿ ಇಂಜಿನಿಯರಿಂಗ್ ಇನ್ಸ್ಟಿಟ್ಯೂಟ್ ಕಟ್ಟಡವನ್ನು ನೆಲಸಮಗೊಳಿಸುವ ಕುರಿತು.**<br><br>**ಠರಾವು:**<br><br>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ–ವಿಭಾಗ, ರಾಯಚೂರು ಇವರು ಕೃಷಿ ತಾಂತ್ರಿಕ ಮಹಾವಿದ್ಯಾಲಯ ಅಧೀನದಲ್ಲಿರುವ ಹಳೆಯ ಕೃಷಿ ಇಂಜಿನೀಯರಿಂಗ್ ಕಟ್ಟಡವನ್ನು ಪರಿವೀಕ್ಷಣೆ ಮಾಡಿ, ನೆಲಸಮಗೊಳಿಸಬಹುದೆಂದು ನೀಡಿದ ಪ್ರಮಾಣಪತ್ರವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಪರಿಶೀಲಿಸಿ, ಸದರಿ ಕಟ್ಟಡವನ್ನು ನೆಲಸಮಗೊಳಿಸಲು ಅನುಮೋದನೆಯನ್ನು ನೀಡಿತು.<br><br>**(ಕ್ರಮ : ಆಸ್ತಿ ಅಧಿಕಾರಿ)**<br><br>**ಐಟಂ–11: ಡಾ. ಸಿದ್ರಾಮ್, ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಸಿ.ಎ.ಎಸ್.–2006 ಅಡಿ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ಕುರಿತು.**<br><br>**ಠರಾವು:**<br><br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ AGRI-AUR/26/2020 ದಿನಾಂಕ 28–8–2020ರ ಅನುಗುಣವಾಗಿ ಹಾಗೂ ವಿಶ್ವವಿದ್ಯಾಲಯದ ಧನಸಹಾಯಕ ಆಯೋಗವು ತನ್ನ ಸಾರ್ವಜನಿಕ ನೋಟೀಸ್ ಸಂ.2 ((16–002–ps)-Pt-Fi-II) ರಲ್ಲಿ ನಿಗದಿತ ಅವಧಿಯಲ್ಲಿ ಕನಿಷ್ಠ ತರಬೇತಿಗಳನ್ನು ಪಡೆದಿರಬೇಕಾದ ವಿಷಯಕ್ಕೆ ವಿನಾಯತಿ ನೀಡಿದ್ದರಿಂದ ಸಿ.ಎ.ಎಸ್–2006 ರ ನಿಯಮಾವಳಿಗಳನ್ವಯ ಡಾ. ಸಿದ್ರಾಮ್, ಸಹಾಯಕ ಪ್ರಾಧ್ಯಾಪಕರು (ಕೃಷಿ ವಿಸ್ತರಣಾ ಶಿಕ್ಷಣ) ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಇವರ ಪದೋನ್ನತಿಯ ಅರ್ಹತಾ ದಿನಾಂಕವನ್ನು ತಿದ್ದುಪಡಿ ಮಾಡುವ ಅಂಶಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆಯನ್ನು ನೀಡಿತು.<br><br>**(ಕ್ರಮ : ಕುಲಸಚಿವರು)** |

| | |
|---|---|
| | **ಐಟಂ ಸಂಖ್ಯೆ 12: ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಪ್ರಾಧ್ಯಾಪಕರನ್ನು ಹೆಚ್.ಎ.ಜಿ. ವೇತನ ಶ್ರೇಣಿಗೆ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.**<br><br>**ಠರಾವು:**<br><br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ AGRI-AUR/25/2020 ದಿನಾಂಕ 28–8–2020ರ ಅನುಗುಣವಾಗಿ ಹಾಗೂ ಸಿ.ಎ.ಎಸ್–2006 ರ ನಿಯಮಾವಳಿಗಳನ್ವಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಪ್ರಾಧ್ಯಾಪಕರನ್ನು ಹೆಚ್.ಎ.ಜಿ. ವೇತನ ಶ್ರೇಣಿಗೆ ಪದೋನ್ನತಿ ನೀಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆಯನ್ನು ನೀಡಿತು.<br><br>**(ಕ್ರಮ : ಕುಲಸಚಿವರು)**<br><br>ಮುಂದುವರೆದು, ದಿನಾಂಕ 8–5–2020 ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 44ನೇ ಸಭೆಯ ನಡವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು ಹಾಗೂ ಈ ಕೆಳಗಿನಂತೆ ನಿರ್ಣಯಿಸಲಾಯಿತು:<br><br>**ಹೆಚ್ಚುವರಿ ಕಾರ್ಯಸೂಚಿ ಸಂಖ್ಯೆ 2 : ರಾಯಚೂರು ಕೃವಿವಿದ ವಿಭಾಗದ ಮುಖ್ಯಸ್ಥರುಗಳ ನಾಮನಿರ್ದೇಶನ ಕುರಿತು.**<br><br>**ಠರಾವು:**<br>ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯದ ಮತ್ತು ಮಹಾವಿದ್ಯಾಲಯಗಳ ವಿವಿಧ ವಿಭಾಗಗಳಿಗೆ ಮುಖ್ಯಸ್ಥರನ್ನು ಜೇಷ್ಠತಾ ಆಧಾರದ ಮೇಲೆ ನಿಯೋಜಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br><br>**(ಕ್ರಮ : ಶಿಕ್ಷಣ ನಿರ್ದೇಶಕರು / ಆಡಳಿತಾಧಿಕಾರಿಗಳು)** |
| **ಐಟಂ–3** | **ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ, ಕೃಷಿ ಸಂಶೋಧನಾ ಕೇಂದ್ರ, ಹಗರಿಯಲ್ಲಿ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರಿನಲ್ಲಿ ಕ್ರಮವಾಗಿ ಎರಡು ವರ್ಷಗಳ ಅವಧಿಯ ಕೃಷಿ ಮತ್ತು ಕೃಷಿ ತಾಂತ್ರಿಕ ಡಿಪ್ಲೋಮಾ ವಿಷಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಕುರಿತು.**<br><br>**ಠರಾವು:**<br><br>2020–21ನೇ ಶೈಕ್ಷಣಿಕ ಸಾಲಿನಿಂದ ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರಿನಲ್ಲಿ ನಡೆಸುತ್ತಿದ್ದ ಎರಡು ವರ್ಷಗಳ ಅವಧಿಯ ಕೃಷಿ ಮತ್ತು ಕೃಷಿ ತಾಂತ್ರಿಕ ಡಿಪ್ಲೋಮಾ ವಿಷಯಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆಯನ್ನು ನೀಡಿತು.<br><br>ಮುಂದುವರೆದು, ಕೃಷಿ ಸಂಶೋಧನಾ ಕೇಂದ್ರ, ಹಗರಿ ಮತ್ತು ಕೃಷಿ ಸಂಶೋಧನಾ ಕೇಂದ್ರ, ಬೀದರ್ ನಲ್ಲಿ ಎರಡು ವರ್ಷಗಳ ಅವಧಿಯ ಕೃಷಿ ಡಿಪ್ಲೋಮಾ ವಿಷಯವನ್ನು ಮುಂದುವರೆಸಲು ನಿರ್ಣಯಿಸಲಾಯಿತು. ಅಲ್ಲದೇ 2020–21ನೇಯ ಸಾಲಿನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸರಕಾರದಿಂದ ಅನುದಾನ ಬರದ ಕಾರಣ, ವಿಶ್ವವಿದ್ಯಾಲಯದಿಂದ ಪ್ರತಿ ತಿಂಗಳು ರೂ. 1000/– ಸ್ಟೇ ಫಂಡ್ ನೀಡುವುದನ್ನು ಸ್ಥಗಿತಗೊಳಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಕುಲಸಚಿವರು / ಡೀನ್ (ಸ್ನಾತಕೋತ್ತರ))** |
| **ಐಟಂ–4** | **ಸಿ.ಎ.ಎಸ್. 2006 ಯೋಜನೆಯಡಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ / ವಿಜ್ಞಾನಿಗಳ ಪದೋನ್ನತಿಯ ಕುರಿತು ಅನುಮೋದನೆ ನೀಡುವುದು.**<br><br>**ಠರಾವು:** |

| | |
|---|---|
| | ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ 7000 ಕ್ಕೆ (**02** ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 7000 ರಿಂದ 8000 ಕ್ಕೆ (**18** ಶಿಕ್ಷಕರುಗಳಿಗೆ), ಎ.ಜಿ.ಪಿ. ರೂ. 8000 ರಿಂದ 9000 ಕ್ಕೆ (**05** ಶಿಕ್ಷಕರುಗಳಿಗೆ) ಹಾಗೂ ಎ.ಜಿ.ಪಿ. ರೂ. 9000 ರಿಂದ 10000 ಕ್ಕೆ (**03** ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಸಿ.ಎ.ಎಸ್.–2006 ನಿಯಮಾವಳಿಗಳ ಪ್ರಕಾರ ಅರ್ಹತೆ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ಆದೇಶಗಳನ್ನು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಮುಂದುವರೆದು, **ಶ್ರೀ. ಆರ್. ಕಿರಣ್‌ಕುಮಾರ್** ಇವರು ನಿಗದಿತ ಅವಧಿಯಲ್ಲಿ ಅವಶ್ಯಕವಿರುವ ಸಂಶೋಧನಾ ಪ್ರಬಂಧಗಳನ್ನು ಹೊಂದಿರದೇ ಇರುವುದರಿಂದ ಹಾಗೂ **ಡಾ. ಜಿ.ಸಿ. ಶೇಖರ್** ಇವರು ನಿಯಮಾವಳಿಗಳನ್ವಯ ಅವಶ್ಯವಿರುವ ಕನಿಷ್ಟ ಅಂಕಗಳನ್ನು ಪಡೆಯದೇ ಇರುವುದರಿಂದ ಸದರಿಯವರುಗಳ ಪದೋನ್ನತಿಯನ್ನು ಮಂಡಳಿಯು ಪರಿಗಣಿಸಿರುವುದಿಲ್ಲ.<br>**(ಕ್ರಮ : ಕುಲಸಚಿವರು)** |
| **ಐಟಂ–5** | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅಧಿಕಾರಿ ಹುದ್ದೆಗಳ ನೇಮಕಾತಿಗೆ ಹೊರಡಿಸಿದ ಅಧಿಸೂಚನೆ ತಿದ್ದುಪಡಿ / ಸೇರ್ಪಡೆ ಮಾಡಿರುವುದಕ್ಕೆ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ವಿಸ್ತರಣಾ ನಿರ್ದೇಶಕರು ಹಾಗೂ ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ ಹುದ್ದೆಗಳನ್ನು ಸ್ಥಳೀಯೇತರ ಹುದ್ದೆಗಳೆಂದು ನಮೂದಿಸಿ ಮತ್ತು ಕೃವಿವಿ., ಸೇರ್ಪಡೆ-ಅಧಿಸೂಚನೆ ಸಂಖ್ಯೆ R/UASR/Rectt./Advt.17/2020/245 ದಿನಾಂಕ 21–7–2020 ಅನ್ನು ಹೊರಡಿಸಿ, ಕೃವಿವಿ., ರಾಯಚೂರಿನಲ್ಲಿ ಕಾರ್ಯನಿರತ ಅಭ್ಯರ್ಥಿಗಳಿಗೆ ಪದವಿಯಲ್ಲಿ ವಿಭಾಗದ ವಿಶೇಷತೆ (Area of specialization) ಯನ್ನು ಸಡಿಲಿಸಿ, ಸದರಿ ಅಧಿಸೂಚನೆಗೆ ಮಾತ್ರ ಅನ್ವಯವಾಗುವಂತೆ ನಮೂದಿಸಿ, ಜಾಹೀರಾತುಪಡಿಸಿದ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸ್ಥಿರೀಕರಿಸಿತು.<br>**(ಕ್ರಮ : ಕುಲಸಚಿವರು)** |
| **ಐಟಂ–6** | **ಕೃವಿವಿ ರಾಯಚೂರಿನ 12ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ನೀಡುವ ವಿವಿಧ ಪ್ರಶಸ್ತಿಗಳಿಗೆ / ಪ್ರೋತ್ಸಹ ಧನಕ್ಕೆ ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗಳಲ್ಲಿ ಅತ್ಯುತ್ತಮ ಸಾಧನೆಗೈದ ಶಿಕ್ಷಕ / ವಿಜ್ಞಾನಿಗಳಿಗೆ ಪ್ರತ್ಯೇಕವಾಗಿ ಪ್ರಶಸ್ತಿಗಳು, ಅತ್ಯುತ್ತಮ ಸೇವಾ ಸಿಬ್ಬಂದಿ ಪ್ರಶಸ್ತಿಗಳು ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನವನ್ನು ಕೃಷಿ ವಿಜ್ಞಾನದ ವಿಶ್ವವಿದ್ಯಾಲಯ ರಾಯಚೂರಿನ ವತಿಯಿಂದ ಆಯ್ಕೆ ಮಾಡಿ, ಪ್ರಶಸ್ತಿ / ಪ್ರೋತ್ಸಾಹ ಧನ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| **ಐಟಂ–7** | **ಕೃವಿವಿ ರಾಯಚೂರಿನಲ್ಲಿ ಹೈ-ಟೆಕ್ ವೆಬಿನಾರ್ ಸ್ಟುಡಿಯೊ–ಕಮ್–ಸ್ಕಿಲ್ ಲ್ಯಾಬ್‌ಅನ್ನು ಸ್ಥಾಪಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಸರ್ಕಾರ ಅಥವಾ ಸರ್ಕಾರದ ವಿವಿಧ ಧನಸಹಾಯ ಸಂಸ್ಥೆಗಳಿಂದ ಅನುದಾನ ಸ್ವೀಕರಿಸಿದ ನಂತರ ಕೃವಿವಿ ರಾಯಚೂರಿನಲ್ಲಿ ಹೈ-ಟೆಕ್ ವೆಬಿನಾರ್ ಸ್ಟುಡಿಯೊ–ಕಮ್–ಸ್ಕಿಲ್ ಲ್ಯಾಬ್‌ಅನ್ನು ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಲಾಯಿತು.<br>**(ಕ್ರಮ : ಕುಲಸಚಿವರು/ ಸರಕು ಖರೀದಿ ಅಧಿಕಾರಿ)** |
| **ಐಟಂ–8** | **ಶ್ರೀಮತಿ ಲಕ್ಷ್ಮಿಬಾಯಿ ಎಸ್.ಕೆ., ಲೈಬ್ರೇರಿಯನ್, ಪ್ರಥಮ ದರ್ಜೆ ಕಾಲೇಜು, ರಾಯಬಾಗ, ಬೆಳಗಾವಿ ಇವರನ್ನು ಕೃವಿವಿ., ರಾಯಚೂರಿಗೆ ನಿಯೋಜಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಶ್ರೀಮತಿ ಲಕ್ಷ್ಮಿಬಾಯಿ ಎಸ್.ಕೆ., ಲೈಬ್ರೇರಿಯನ್, ಪ್ರಥಮ ದರ್ಜೆ ಕಾಲೇಜು, ರಾಯಬಾಗ, ಬೆಳಗಾವಿ ಇವರನ್ನು ಕೃವಿವಿ., ರಾಯಚೂರಿಗೆ ಎನ್.ಎ.ಹೆಚ್.ಇ.ಪಿ. ಯೋಜನೆಯ ಅನುಷ್ಠಾನಕ್ಕಾಗಿ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಆರ್ಥಿಕವಾಗಿ ಯಾವುದೇ ಹೊರೆ ಇಲ್ಲದೇ 3 ರಿಂದ 5 ವರ್ಷಗಳ ಕಾಲ |

ಕೃವಿವಿ., ರಾಯಚೂರಿಗೆ ನಿಯೋಜನೆ ಮಾಡುವ ಪ್ರಸ್ತಾವನೆಯನ್ನು ಸಭೆಯು ಅನುಮತಿಸಿರುವುದಿಲ್ಲ. ಈ ದಿಸೆಯಲ್ಲಿ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಂದ ಅನುಮತಿ ಪಡೆದು ವಿಶ್ವವಿದ್ಯಾಲಯದ ಹಿತದೃಷ್ಠಿಯಿಂದ ಯಾವುದೇ ಆರ್ಥಿಕ ಹೊರೆ ಇಲ್ಲದೆ (ವೇತನ+ಡಿ.ಎ.+ಇತರೆ ಭತ್ಯೆಗಳು) ಮತ್ತು ಇನ್ನಿತರ ಸೌಲಭ್ಯಗಳನ್ನು ಕಾಲೇಜು ಶಿಕ್ಷಣ ಇಲಾಖೆ ಇವರು ನೀಡಿದ ಪಕ್ಷದಲ್ಲಿ ಮುಂದಿನ ದಿನಗಳಲ್ಲಿ ಸದರಿ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು.

**(ಕ್ರಮ : ಕುಲಸಚಿವರು)**

**ಐಟಂ-9** **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.**

**ಠರಾವು:**

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣ ಮತ್ತು ಕೃಸಂ.ಕೇಂದ್ರ, ಗಂಗಾವತಿ ಆವರಣದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ.) ಲಕ್ಷಗಳಲ್ಲಿ | ಅನುದಾನ ವಿವರ |
|---|---|---|---|
| | **ಕೃ.ವಿ.ವಿ., ರಾಯಚೂರು.** | | |
| 1 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಸಮಗ್ರ ಕೃಷಿ ಪದ್ಧತಿಗಳ ಉತ್ಕೃಷ್ಟತಾ ಕೇಂದ್ರವನ್ನು ನಿರ್ಮಿಸುವ ಕೆಲಸ. | 80.00 | ಆರ್.ಕೆ.ವಿ.ವಾಯ್. ಅನುದಾನ |
| 2 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ದಾಸ್ತಾನು ಗುಣಮಟ್ಟ ಹೆಚ್ಚಿಸಲು ದ್ವಿದಳ ಬೀಜಗಳ ದೀರ್ಘಾವಧಿಯ ದಾಸ್ತಾನುಗಾಗಿ ವ್ಯಾಕೂಮ್ ಪ್ಯಾಕೇಜಿಂಗ್ ಪ್ರಯೋಗಾಲಯ ನಿರ್ಮಿಸುವ ಕೆಲಸ. **65.00** | 190.00 | ಆರ್.ಕೆ.ವಿ.ವಾಯ್. ಅನುದಾನ |
| 3 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಬರಗಾಲ ಪರಿಸ್ಥಿತಿಯಲ್ಲಿ ಹಸಿರು ಮೇವಿನ ಕೊರತೆಯನ್ನು ನೀಗಿಸಲು ಹೈಡ್ರೋಫೋನಿಕ್ ಕೃಷಿ ಕೇಂದ್ರವನ್ನು ನಿರ್ಮಿಸುವ ಕೆಲಸ. **65.00** | | ಆರ್.ಕೆ.ವಿ.ವಾಯ್. ಅನುದಾನ |
| 4 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಕೃಷಿ ಪರಿಕರಗಳು ಮತ್ತು ಭೂ ಆರೋಗ್ಯ ನಿರ್ವಹಣೆಗಾಗಿ ಜೀಯೊಸ್ಪೆಶಿಯಲ್ ತಾಂತ್ರಿಕತೆಗಳ ತಂತ್ರಾಂಶಗಳ ಕೇಂದ್ರ ನಿರ್ಮಿಸುವ ಕೆಲಸ. **60.00** | | ಆರ್.ಕೆ.ವಿ.ವಾಯ್. ಅನುದಾನ |
| 5 | ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು ಆವರಣದಲ್ಲಿ ರೋಗನಿರೋಧಕಾ ಶಕ್ತಿಯನ್ನು ಹೆಚ್ಚಿಸುವ ಆಹಾರ ಪ್ರಯೋಗಾಲಯವನ್ನು (ರಾಗಿ ಬೇಕರಿ ಘಟಕದ ಮೇಲೆ) ನಿರ್ಮಿಸುವ ಕೆಲಸ. **23.05** | 73.43 | 53.00 ಲಕ್ಷ ರೂ.ಗಳು ಆರ್.ಕೆ.ವಿ.ವಾಯ್. ಅನುದಾನ ಮತ್ತು 20.43 ಲಕ್ಷ ರೂ.ಗಳು ಕೃ.ವಿ.ವಿ., ಅನುದಾನ |
| 6 | ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು ಆವರಣದಲ್ಲಿ ಮಶ್ರೂಮ್ ಪ್ರೊಡಕ್ಷನ್ ಪ್ರಯೋಗಾಲಯವನ್ನು ನಿರ್ಮಿಸುವ ಕೆಲಸ. **18.93** | | |
| 7 | ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು ಆವರಣದಲ್ಲಿ ಬಲವರ್ಧಿತ ಆಹಾರ ಸಂಸ್ಕರಣ ಪ್ರಯೋಗಾಲಯ ನಿರ್ಮಿಸುವ ಕೆಲಸ. **31.45** | | |
| 8 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ | 350.00 | |

| | | | |
|---|---|---|---|
| | ಕೃಷಿ ಮಹಾವಿದ್ಯಾಲಯದ ಹಿಂದಿನ ಭಾಗಕ್ಕೆ ಮೊದಲನೆ ಮಹಡಿಯನ್ನು ನಿರ್ಮಿಸುವ ಕೆಲಸ. | | ಕೃ.ವಿ.ವಿ. ಅನುದಾನ |
| | **ಕೃಷಿ ಸಂಶೋಧನಾ ಕೇಂದ್ರ ಗಂಗಾವತಿ ಆವರಣ.** | | |
| 9 | ಗಂಗಾವತಿ ಆವರಣದಲ್ಲಿ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ ಮತ್ತು ಭತ್ತ ಸಂಶೋಧನಾ ಕಟ್ಟಡದ ಮುಂದಿನ ರಸ್ತೆಗಳ ಸುಧಾರಣೆಯ ಕೆಲಸ. | 44.00 | ಕೃ.ವಿ.ವಿ. ಅನುದಾನ |
| | **ಕೃಷಿ ಮಹಾವಿದ್ಯಾಲಯ ಆವರಣ ಕಲಬುರ್ಗಿ.** | | |
| 10 | ಕೃಷಿ ಮಹಾವಿದ್ಯಾಲಯ ಕಲಬುರ್ಗಿಯಲ್ಲಿ ಕೃಷಿ ಮಹಾವಿದ್ಯಾಲಯ ಕಟ್ಟಡದ (ಉಳಿದ ಭಾಗ (ನೆಲಮಹಡಿ) ನಿರ್ಮಿಸುವ ಕೆಲಸ. | 545.00 | ಆರ್.ಐ.ಡಿ.ಎಫ್–26 (ನಬಾರ್ಡ) ಅನುದಾನ |
| 11 | ಕೃಷಿ ಮಹಾವಿದ್ಯಾಲಯ ಕಲಬುರ್ಗಿ ಆವರಣದ ಪಲ್ಲಾಪುರ್ ಪ್ಲಾಟಿನ ಬಾಲಕರ ವಸತಿನಿಲಯದ ಸುತ್ತಮುತ್ತಲಿನ ಕಾಂಪೌಂಡ್ ಗೋಡೆಯ ಉಳಿದ ಭಾಗವನ್ನು ನಿರ್ಮಿಸುವ ಕೆಲಸ. | 46.06 | ಕೃ.ವಿ.ವಿ. ಅನುದಾನ |
| 12 | ಕೃಷಿ ಮಹಾವಿದ್ಯಾಲಯ ಕಲಬುರ್ಗಿ ಆವರಣದ ಜಫ್ರಾಬಾದ್ ಗ್ರಾಮದ ಸರ್ವೇ ನಂಬರ್ 18/1 ಓಪನ್ ಸೈಟ್‌ಗೆ ಕಾಂಪೌಂಡ್ ಗೋಡೆಯನ್ನು ನಿರ್ಮಿಸುವ ಕೆಲಸ. | 20.11 | ಕೃ.ವಿ.ವಿ. ಅನುದಾನ |
| | **ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ ಆವರಣ.** | | |
| 13 | ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿ ಬಾಲಕಿಯರ ವಸತಿನಿಲಯ ನಿರ್ಮಿಸುವ ಕೆಲಸ. (ನೆಲಮಹಡಿ). | 425.00 | ಆರ್.ಐ.ಡಿ.ಎಫ್–26 (ನಬಾರ್ಡ) ಅನುದಾನ |

**(ಕ್ರಮ : ಆಸ್ತಿ ಅಧಿಕಾರಿ)**

**ಐಟಂ–10** **ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರತಿ ಉಪಕರಣದ /ವಾಹನದ ಖರೀದಿಗೆ ಅನುಮೋದನೆ ನೀಡುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಈ ಕೆಳಕಂಡ ಪ್ರಯೋಗಾಲಯದ ಪ್ರತಿ ಉಪಕರಣಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| Sl. No. | Name of the item | Name of the Department/ Project | Ab.A/c. No. | Qty | Appr. Cost (Rs. in Lakhs) | Remarks |
|---|---|---|---|---|---|---|
| 1. | Fully Automatic Hydroponic Unit (50 kg Green Fodder Capacity) | Director of Research UAS, Raichur. | 6790/701 | 50 Units | 97.50 | Establishment and demonstration of hydroponic Technology in HK Region. |
| 2. | Vacuum Packaging machine with accessories | Director of Research, UAS, Raichur. | 6791/701 | 01 | 15.00 | Establishment of Vacuum packaging Laboratory for extending storability of pulse crop seeds for long term storage. |

| | | | | | | |
|---|---|---|---|---|---|---|
| 3. | Cold storage Unit | Director of Research, UAS, Raichur. | 6794/701 | 01 | 15.42 | Establishment of Vacuum packaging Laboratory for extending storability of pulse crop seeds for long term storage. |
| 4. | LCMSMS | Pesticide Residue Food Quality analyse Laboratory UAS, Raichur | 6949/701 | 01 | 130.00 | Determination of quality of pesticide formulation at HK region |
| 5. | Laboratory Furnitures | Pesticide Residue and Food Quality Analysis Laboratory, UAS, Raichur | 6949 | As per Specifications | 54.00 | Laboratory Furniture Under RKVY Project |
| 6. | Analytical Balance | Pesticide Residue Food Quality analysis Laboratory UAS, Raichur | 6949/701 | 01 | 13.30 | Determination of quality of pesticide formulation at HK region |
| 7 | Fortified Rice Analogues Production Unit | Department of Processing and Food Engineering, CAE, Raichur | 6786/701 | 01 Unit | 75.00 | Mitigation of Effects of Covid-19 Outbreak through Empowerment of Rural Women & Youth by Incorporating Health Foods, Immunity Booster and Life Skill Training Method |

ಮುಂದುವರೆದು, ಕೃಷಿ ವಿಸ್ತರಣಾ ಕೇಂದ್ರ, ನಾಲವಾರ ಮತ್ತು ದೇವದುರ್ಗ ಕೇಂದ್ರಗಳ ಕೃಷಿ ವಿಸ್ತರಣಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಎರಡು ವಾಹನಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಸರಕಾರದ ಅನುಮತಿಯನ್ನು ಪಡೆದು ಕ್ರಮ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

**(ಕ್ರಮ : ಸರಕು ಖರೀದಿ ಅಧಿಕಾರಿಗಳು)**

**ಐಟಂ–11** **2018–19 ನೇ ಸಾಲಿನಲ್ಲಿ ತೆಗೆದುಕೊಂಡ ಬೀಜೋತ್ಪಾದನೆಗೆ 2020–21ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಪ್ರೋತ್ಸಾಹ ಧನ ನೀಡಲು ಹಣಕಾಸಿನ ಅನುಮೋದನೆ ಕುರಿತು.**

**ಠರಾವು:**

ಚರ್ಚೆಯ ನಂತರ, 2018–19 ನೇ ಸಾಲಿನಲ್ಲಿ ತೆಗೆದುಕೊಂಡ ಬೀಜೋತ್ಪಾದನೆಗೆ 2020–21ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಪ್ರೋತ್ಸಾಹ ಧನವನ್ನು ಈ ಕೆಳಕಂಡಂತೆ ಕೋಷ್ಠಕದಲ್ಲಿ ತೋರಿಸಿದಂತೆ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| ಕ್ರ.ಸಂ. | ಹಣಕಾಸಿನ ಮೂಲ | ಪ್ರಮಾಣ (ಕ್ವಿಂ) | ಮೊತ್ತ (ಲಕ್ಷಗಳಲ್ಲಿ) | ಆವರ್ತ ನಿಧಿ / ಲೆಕ್ಕ ಶಿರ್ಷಿಕೆ |
|---|---|---|---|---|
| 1. | ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆ | 1284.71 | 53.44393 | 7411/903 |

| | |
|---|---|
| | **(ಕ್ರಮ : ವಿಶೇಷಾಧಿಕಾರಿಗಳು (ಬೀಜ))** |
| ಐಟಂ–12 | **ರೂ. 2.00 ಲಕ್ಷಗಳವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಕುಲಪತಿಯವರಿಗೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ರೂ. 2.00 ಲಕ್ಷಗಳವರೆಗಿನ ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಕುಲಪತಿಯವರಿಗೆ ನೀಡುವ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕೈಬಿಡಲಾಯಿತು.<br>**(ಕ್ರಮ : ಕುಲಸಚಿವರು)** |
| ಐಟಂ–13 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2019–20ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2019–20 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ–14 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2017–18 ನೇ ಸಾಲಿನ ಲೆಕ್ಕ ಪರಿಶೋದನಾ ವರದಿಗಳ.. ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2017–18 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ–15 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2014–15 ನೇ ಸಾಲಿನಿಂದ 2017–18 ನೇ ಸಾಲಿನವರೆಗೆ ಲೆಕ್ಕ ಪರಿಶೋದನಾ ವರದಿಗಳ ಅನುಪಾಲನಾ ವರದಿಗಳನ್ನು ತಿರುವಳಿಗಾಗಿ ಆಡಾಕ್ ಸಮಿತಿಗೆ ಸಲ್ಲಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2014–15 ನೇ ಸಾಲಿನಿಂದ 2017–18 ನೇ ಸಾಲಿನವರೆಗಿನ ಲೆಕ್ಕ ಪರಿಶೋದನಾ ವರದಿಗಳ ಅನುಪಾಲನಾ ವರದಿಗಳನ್ನು ತಿರುವಳಿಗಾಗಿ ಆಡಾಕ್ ಸಮಿತಿಗೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)** |
| ಐಟಂ–16 | **ಡಾ. ಎಮ್.ಎನ್. ಶೀಲವಂತರ್ ಸಮಿತಿಯ ವರದಿಯನ್ವಯ ಕ್ರಮ ಕೈಗೊಳ್ಳಲು ಅನುಮೋದನೆ ಕುರಿತು.**<br>**ಠರಾವು:**<br>ಸುದೀರ್ಘ ಚರ್ಚೆಯ ನಂತರ, ಡಾ॥ ಎಂ.ಎನ್. ಶೀಲವಂತರ್ ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳುವ / ಒಪ್ಪಿಕೊಳ್ಳದಿರುವ ಮತ್ತು ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳ ಪರಿಶೀಲನಾ ಪಟ್ಟಿಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ. ಕೃಇ37 ಕೃವಿರಾ 2017 ದಿನಾಂಕ 23–10–2020 ಪ್ರಕಾರ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ : ಕುಲಸಚಿವರು)** |
| ಐಟಂ–17 | **ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯಲ್ಲಿ ಹಾಗೂ ಕೃಷಿ ಸಂಶೋಧನಾ ಕೇಂದ್ರ, ಹಗರಿಯಲ್ಲಿ ನೂತನ ಕೃಷಿ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಅನುಮೋದನೆ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಸರ್ಕಾರದ ಆಡಳಿತಾತ್ಮಕ ಅನುಮೋದನೆ ಹಾಗೂ ಹುದ್ದೆಗಳ ಸೃಜನೆಗಳೊಂದಿಗೆ ಕೃಷಿ |

| | |
|---|---|
| | ಸಂಶೋಧನಾ ಕೇಂದ್ರ, ಗಂಗಾವತಿಯ ಆವರಣದಲ್ಲಿ 2020–21ನೇ ಶೈಕ್ಷಣಿಕ ವರ್ಷದಲ್ಲಿ ಹಾಗೂ ಕೃಷಿ ಸಂಶೋಧನಾ ಕೇಂದ್ರ, ಹಗರಿಯ ಆವರಣದಲ್ಲಿ 2021–22 ನೇ ಶೈಕ್ಷಣಿಕ ವರ್ಷದಲ್ಲಿ ನೂತನ ಕೃಷಿ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಹಾಗೂ ಪ್ರಾರಂಭದಲ್ಲಿ ಖರ್ಚು ಭರಿಸಲು ಪ್ರತಿ ಮಹಾವಿದ್ಯಾಲಯಕ್ಕೆ ಬೇಕಾಗುವ ರೂ. 50 ಲಕ್ಷಗಳನ್ನು ವಿಶ್ವವಿದ್ಯಾಲಯದಿಂದ ಒದಗಿಸಲು ಮತ್ತು 2020–21ನೇ ಸಾಲಿನಲ್ಲಿ ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯಲ್ಲಿ ಕೃಷಿ ಮಹಾವಿದ್ಯಾಲಯ ಪ್ರಾರಂಭಿಸಲು ಹಾಗೂ ಮೂಲಭೂತ ಶೌಕರ್ಯಗಳನ್ನು ಒದಗಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| **ಐಟಂ–18** | **ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ನೂತನ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಸ್ಥಾಪನೆ.**<br>**ಠರಾವು:**<br>ಚರ್ಚೆಯ ನಂತರ, ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನಲ್ಲಿ ನೂತನ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಸ್ಥಾಪನೆಯ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕೈಬಿಡಲಾಯಿತು.<br>**(ಕ್ರಮ : ವಿಸ್ತರಣಾ ನಿರ್ದೇಶಕರು)** |
| **ಐಟಂ–19** | **ಕೃವಿವಿ., ರಾಯಚೂರಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದ ಶಿಕ್ಷಕರು ಸಂಶೋಧನೆ ಹಾಗೂ ಅಡ್–ಹಾಕ್ ಯೋಜನೆಗಳನ್ನು ಕೈಗೊಳ್ಳಲು ಎಸ್‌ಸಿಎಸ್‌ಪಿ / ಟಿಎಸ್‌ಪಿ ಯೋಜನೆಯ ಅನುದಾನವನ್ನು ಬಳಕೆ ಮಾಡಿಕೊಳ್ಳುವ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃವಿವಿ., ರಾಯಚೂರಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದ ಶಿಕ್ಷಕರು ಕಲ್ಯಾಣ ಕರ್ನಾಟಕದ ರೈತರಿಗೆ ಅವಶ್ಯವಾದ ಸಂಶೋಧನೆ ಹಾಗೂ ಅಡ್–ಹಾಕ್ ಯೋಜನೆಗಳನ್ನು ಕೈಗೊಳ್ಳಲು ಎಸ್‌ಸಿಎಸ್‌ಪಿ / ಟಿಎಸ್‌ಪಿ ಯೋಜನೆಯ ಅನುದಾನವನ್ನು ಬಳಕೆಯ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ : ಕುಲಸಚಿವರು)** |
| **ಐಟಂ–20** | **ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಕೋವಿಡ್–19 ಆರ್ಥಿಕ ನಿರ್ಬಂಧದ ಹಿನ್ನೆಲೆಯಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ ಮಾಸಿಕ ಗೌರವಧನವನ್ನು 2019–20 ನೇ ಸಾಲಿನಲ್ಲಿ ಅನುಮೋದನೆಗೊಳಿಸದೇ ಸದರಿ ಪ್ರಸ್ತಾವನೆಯನ್ನು ದಿನಾಂಕ 1–4–2021 ರಿಂದ ಅನ್ವಯವಾಗುವಂತೆ ಈ ಕೆಳಗಿನ ಕೋಷ್ಟಕದಲ್ಲಿ ಪರೀಷ್ಕರಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

| ವಿವರ | ಪ್ರಸ್ತುತ ದರ (ರೂ.) | ಪರೀಷ್ಕೃತ ದರ (ರೂ.) |
|---|---|---|
| ಕೃಷಿ ಪದವೀಧರರು | 25,000/– ಪ್ರತಿ ತಿಂಗಳು | 30,000/– ಪ್ರತಿ ತಿಂಗಳು |
| ಸ್ನಾತಕೋತ್ತರ ಪದವೀಧರರು | 30,000/– ಪ್ರತಿ ತಿಂಗಳು | 40,000/– ಪ್ರತಿ ತಿಂಗಳು |
| ಪಿ.ಹೆಚ್.ಡಿ. ಪದವೀಧರರು | 35,000/– ಪ್ರತಿ ತಿಂಗಳು | 45,000/– ಪ್ರತಿ ತಿಂಗಳು |

**(ಕ್ರಮ : ಕುಲಸಚಿವರು)**

| | |
|---|---|
| **ಐಟಂ–21** | **ರಾಯಚೂರು ಕೃವಿವಿ.,ಯಿಂದ ಧಾರವಾಡ ಕೃವಿವಿ.,ಗೆ ವಾಪಸಾತಿ ಸೌಲಭ್ಯ (Repartriation) ಅಡಿಯಲ್ಲಿ ಸಿಬ್ಬಂದಿಗಳನ್ನು ವರ್ಗಾವಣೆ ಮಾಡುವ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ಅಧಿನಿಯಮ 2009 ಸೆಕ್ಷನ್ 9(ಇ) ಯನ್ವಯ ಕೃವಿವಿ., ರಾಯಚೂರು ನಲ್ಲಿ ಯಾವುದೇ ಹೆಚ್ಚುವರಿಯಾಗಿರುವ ಬೋಧನಾ ಮತ್ತು ಇತರೆ ಸಿಬ್ಬಂದಿಯನ್ನು ಸಂದರ್ಭಾನುಸಾರ ಕೃವಿವಿ., ಧಾರವಾಡಕ್ಕೆ ಉಭಯ ವಿಶ್ವವಿದ್ಯಾಲಯಗಳೊಡನೆ ಸಮಾಲೋಚಿಸಿ, ತಾನು |

| | |
|---|---|
| | ಯುಕ್ತವೆಂದು ಪರಿಗಣಿಸಿಬಹುದಾದ ತತ್ವಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿ ರಾಜ್ಯ ಸರ್ಕಾರವು ವರ್ಗಾಯಿಸಲು ಅವಕಾಶವಿರುವ ಹಿನ್ನೆಲೆಯಲ್ಲಿ ರಾಯಚೂರು ಕೃವಿವಿ.,ಯಿಂದ ಧಾರವಾಡ ಕೃವಿವಿ.,ಗೆ ವಾಪಸಾತಿ ಸೌಲಭ್ಯ (Repartriation) ಅಡಿಯಲ್ಲಿ ಕೋರಿರುವ ಒಟ್ಟು ಪ್ರಸ್ತಾವನೆಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ : ಕುಲಸಚಿವರು)** |
| ಐಟಂ–22 | **ಸೀಡ್ ಹಬ್ ಯೋಜನೆಯಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ, ಬೀದರ್‌ನಲ್ಲಿ ಬಳಕೆಯಾಗದೆ ಉಳಿದ ಅನುದಾನವನ್ನು ನೋಡಲ್ ಸಂಸ್ಥೆಗೆ ಹಿಂತಿರುಗಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ಸೀಡ್ ಹಬ್ ಯೋಜನೆಯಡಿಯಲ್ಲಿ ಕೃಷಿ ವಿಜ್ಞಾನ ಕೇಂದ್ರ, ಬೀದರ್ ನಲ್ಲಿ ಎನ್.ಆರ್.ಸಿ. ಅಡಿಯಲ್ಲಿ ಬಳಕೆಯಾಗದೆ ಉಳಿದ ರೂ. 13,19,266/– (ಹದಿಮೂರು ಲಕ್ಷ ಹತ್ತೊಂಬತ್ತು ಸಾವಿರದ ಎರಡು ನೂರ ಆರವತ್ತಾರು ರೂಪಾಯಿಗಳು ಮಾತ್ರ) ಗಳನ್ನು ನೋಡಲ್ ಸಂಸ್ಥೆಯಾದ ಭಾರತೀಯ ಬೇಳೆಕಾಳು ಸಂಶೋಧನಾ ಕೇಂದ್ರ, ಕಾನಪುರ, ಉತ್ತರ ಪ್ರದೇಶಕ್ಕೆ ಹಿಂತಿರುಗಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ವಿಸ್ತರಣಾ ನಿರ್ದೇಶಕರು)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| ಐಟಂ–1 | **ಕೃವಿವಿ., ರಾಯಚೂರಿನಲ್ಲಿ ಅನಿವಾಸಿ ಭಾರತೀಯರ ಕೋಟಾದಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪದವಿ ಕಾರ್ಯಕ್ರಮ ರದ್ದುಪಡಿಸಿ ಪ್ರವೇಶ ಶುಲ್ಕವನ್ನು ಮರುಪಾವತಿಸಲು ಕೋರುವ ಮನವಿ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃವಿವಿ., ರಾಯಚೂರಿನಲ್ಲಿ ಅನಿವಾಸಿ ಭಾರತೀಯರ ಕೋಟಾದ ಸೀಟುಗಳಿಗೆ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಯಾವುದೇ ಕಾರಣಕ್ಕಾಗಿ ಪ್ರವೇಶ ರದ್ದು ಪಡಿಸಿದಲ್ಲಿ, ಪ್ರವೇಶ ಸಮಯದಲ್ಲಿ ಪಾವತಿಸಿದ ಸಾಂಸ್ಥಿಕ ಆರ್ಥಿಕ ಶುಲ್ಕ (Institutional Economic Fee) ಮತ್ತು ಷಣ್ಮಾಸಿಕ ಶುಲ್ಕ (Semester Fee) ಗಳನ್ನು ಹಿಂದಿರುಗಿಸಬಾರದೆಂದು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ : ಕುಲಸಚಿವರು)** |
| ಐಟಂ–2 | **ಚಾಲೆಂಜ್ ಫಂಡ್ ಯೋಜನೆಯಡಿಯಲ್ಲಿ ಸಲ್ಲಿಸಿದ ಪ್ರಸ್ತಾವನೆಗೆ ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಚಾಲೆಂಜ್ ಫಂಡ್ ಯೋಜನೆಯಡಿಯಲ್ಲಿ ವಿಶ್ವವಿದ್ಯಾಲಯವು ಸರ್ಕಾರಕ್ಕೆ ಪರಿಗಣನೆಗಾಗಿ ಸಲ್ಲಿಸಿದ **ರೂ. 5,54,62,000/–ಗಳ** ಅಂದಾಜು ಅನುದಾನದ ವಿವರಗಳನ್ನೊಳಗೊಂ **ಸಂಯೋಜಿತ ವಿಶ್ವವಿದ್ಯಾಲಯ ನಿರ್ವಹಣಾ ವ್ಯವಸ್ಥೆ (Integrated University Management System)** ಕುರಿತ ಯೋಜನೆಯು ಸರ್ಕಾರದಿಂದ ಅನುಮೋದನೆಗೊಂಡಲ್ಲಿ ವಿಶ್ವವಿದ್ಯಾಲಯವು ಸದರಿ ಯೋಜನೆಯನ್ನು ಜಾರಿಗೆ ತರುವುದು. ಒಂದು ವೇಳೆ ಸದರಿ ಯೋಜನೆಯು ಸರ್ಕಾರದಿಂದ ಅನುಮೋದನೆಗೊಂಡಿಲ್ಲದ ಪಕ್ಷದಲ್ಲಿ **ಅಟೋಮೆಟೆಡ್ ಅಕಾಡಮಿಕ್ ಎಕ್ಸಮಿನೇಶನ್ ಮ್ಯಾನೇಜ್‌ಮೆಂಟ್** ಅನ್ನು ಅಳವಡಿಸಲು ತಗಲುವ ವೆಚ್ಚ ರೂ. 50 ಲಕ್ಷಗಳ ಅನುದಾನವನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ ನವದೆಹಲಿ ಇವರಿಂದ ಪಡೆಯುವುದು, ತಪ್ಪಿದ್ದಲ್ಲಿ, ವಿಶ್ವವಿದ್ಯಾಲಯದ ಅನುದಾನದಿಂದಲೇ ಅಟೋಮೆಟೆಡ್ ಅಕಾಡಮಿಕ್ ಎಕ್ಸಮಿನೇಶನ್ ಮ್ಯಾನೇಜ್‌ಮೆಂಟ್ ಅನ್ನು ಅಳವಡಿಸಿಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ : ಕುಲಸಚಿವರು)** |
| ಐಟಂ–3 | **ವಿಶೇಷ ಘಟಕ / ಗಿರಿಜನ (ಎಸ್.ಸಿ.ಎಸ್.ಪಿ/ಟಿ.ಎಸ್.ಪಿ.) ಉಪಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃವಿವಿ., ರಾಯಚೂರಿನಲ್ಲಿ ಪ್ರಥಮ ವರ್ಷದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯನ್ನು ಅಭ್ಯಸಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ವಿಶೇಷ ಘಟಕ / ಗಿರಿಜನ |

| | |
|---|---|
| | (ಎಸ್.ಸಿ.ಎಸ್.ಪಿ/ಟಿ.ಎಸ್.ಪಿ.) ಉಪಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಪ್ರಸ್ತಾವನೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಕುಲಸಚಿವರು)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
| 1 | **ಒಬ್ಬರಿಗೆ ಒಂದು ಅಧಿಕಾರಿ ಹುದ್ದೆಯ ಜವಾಬ್ದಾರಿ ವಹಿಸುವ ಕುರಿತು.**<br>**ಠರಾವು:**<br>ಮಾನ್ಯ ಸದಸ್ಯರಾದ ಶ್ರೀ ಕೊಟ್ರಪ್ಪ ಕೊರೇರ ಮತ್ತು ಶ್ರೀ ತ್ರಿವಿಕ್ರಮ ಜೋಶಿ ರವರು ರಾಯಚೂರು ಕೃವಿವಿ., ರಾಯಚೂರಿನಲ್ಲಿ ಒಬ್ಬರಿಗೆ ಎರಡು ಅಧಿಕಾರಿಗಳ ಜವಾಬ್ದಾರಿ ವಹಿಸಿರುವ ವಿಷಯವನ್ನು ಪ್ರಸ್ತಾಪಿಸಲಾಗಿ, ಮಂಡಳಿಯು ಒಬ್ಬರಿಗೆ ಒಂದು ಅಧಿಕಾರಿ ಹುದ್ದೆಯ ಜವಾಬ್ದಾರಿ ವಹಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು. **(ಕ್ರಮ : ಕುಲಸಚಿವರು)** |
| 2 | **ಮಾರಾಟ ಮಳಿಗೆಗಳನ್ನು ಸ್ಥಾಪಿಸುವ ಕುರಿತು.**<br>**ಠರಾವು:**<br>ಮಾನ್ಯ ಸದಸ್ಯರಾದ ಶ್ರೀ ಜಿ. ಶ್ರೀಧರ ಕೆಸರಹಟ್ಟಿ, ಶ್ರೀ ಮಹಾಂತೇಶ್‌ಗೌಡ ಪಾಟೀಲ್ ಮತ್ತು ಶ್ರೀ ಸುನೀಲ್ ಇವರು ರಾಯಚೂರು ಕೃವಿವಿ.,ಯ ಮುಖ್ಯದ್ವಾರದ ಹತ್ತಿರ, ಕೃಷಿ ಸಂಶೋಧನಾ, ಗಂಗಾವತಿಯಲ್ಲಿ ಮುಖ್ಯ ರಸ್ತೆಯಲ್ಲಿ ಹಾಗೂ ಕೃಷಿ ಸಂಶೋಧನಾ ಕೇಂದ್ರ, ಕವಡಿಮಟ್ಟಿಯ ಮುಖ್ಯ ರಸ್ತೆಯ ಬಳಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿ, ಸದರಿ ಮೂರು ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು/ ಆಸ್ತಿ ಅಧಿಕಾರಿ)** |
| 3 | **ಕೃವಿವಿ., ರಾಯಚೂರಿನ ಮುಖ್ಯ ಆವರಣ, ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿಯಲ್ಲಿ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವುದರ ಕುರಿತು.**<br>**ಠರಾವು:**<br>ಮಾನ್ಯ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು ಇತ್ತೀಚೆಗೆ ವಿಶ್ವವಿದ್ಯಾಲಯದ ವಿವಿಧ ಕೇಂದ್ರಗಳಿಗೆ ಭೇಟಿ ನೀಡಿ, ಕೇಂದ್ರಗಳ ಅಭಿವೃದ್ಧಿಗೆ ತಮ್ಮ ಸಲಹೆಗಳನ್ನು ನೀಡಿದ್ದು, ಕೃವಿವಿ., ರಾಯಚೂರಿನ ಮುಖ್ಯ ಆವರಣದಲ್ಲಿ ಕೃಷಿ ಹೊಂಡಾ ನಿರ್ಮಾಣ ಮಾಡಲು ಹಾಗೂ ಕೃಷಿ ಸಂಶೋಧನಾ ಕೇಂದ್ರ, ಭೀಮರಾಯನಗುಡಿಯಲ್ಲಿ ಎರೆಹುಳು ಗೊಬ್ಬರ, ದನದ ಕೊಟ್ಟಿಗೆ ಹಾಗು ಕೃಷಿ ಹೊಂಡಾ ನಿರ್ಮಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ಆಸ್ತಿ ಅಧಿಕಾರಿ)** |
| 4 | **ವಿಶ್ವವಿದ್ಯಾಲಯದ ವ್ಯಾಪ್ತಿಯ ಪ್ರಗತಿಪರ ರೈತರನ್ನು ಹಾಗೂ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರನ್ನೊಳಗೊಂಡಂತೆ ಸದಸ್ಯರ ಇಸ್ರೇಲ್ ಪ್ರವಾಸದ ಕುರಿತು.**<br>**ಠರಾವು:**<br>ವಿವಿಧ ಸುಧಾರಿತ ತಂತ್ರಜ್ಞಾನಗಳನ್ನು ಅರಿಯಲು ವಿಶ್ವವಿದ್ಯಾಲಯದ ವ್ಯಾಪ್ತಿಯ ಪ್ರಗತಿಪರ ರೈತರನ್ನು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯ-ಕಾರ್ಯದರ್ಶಿಗಳನ್ನೊಳಗೊಂಡಂತೆ ಮಾನ್ಯ ಸದಸ್ಯರುಗಳು ಇಸ್ರೇಲ್ ಪ್ರವಾಸ ಕೈಗೊಳ್ಳಲು ಇಚ್ಛಿಸಿದ್ದು, ಚರ್ಚೆಯ ನಂತರ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು.<br>**(ಕ್ರಮ : ಕುಲಸಚಿವರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 07–12–2020 | ಸಹಿ /– 07–12–2020 |
|---|---|
| **(ಕೆ.ಎನ್. ಕಟ್ಟಿಮನಿ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಎಂ.ಜಿ. ಪಾಟೀಲ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಎಂ.ಜಿ. ಪಾಟೀಲ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.